



# ಮರದ ಮೇಲೇರಿದ ಮೇಕೆ

ಮರದ ಮೇಲೆ ಬೆಳೆಯುತ್ತಿರುವ ಆಡುಗಳ ಅಥವಾ ಜೋಡಿಸಿಟ್ಟ ಆಡಿನ ಗೊಂಬೆಗಳ ಚಿತ್ರವಿದೆಂದು ನೀವು ಊಹಿಸುತ್ತಿರುವಿರಾದರೆ ನಿಮ್ಮದು ತಪ್ಪು ಕಲ್ಪನೆ. ಉತ್ತರ ಆಫ್ರಿಕಾದ ಮೊರಾಕೊ ರಾಷ್ಟ್ರದ 'ಟಮ್ರಿ' ಎಂಬ ಹಳ್ಳಿಯ ಸುತ್ತಮುತ್ತಲೆಲ್ಲಾ ಮೇಕೆಗಳು ಮರ ಹತ್ತುತ್ತವೆ. ಅವು ಹೇಗೆ ಈ ಪರಿ ಮರವೇರುತ್ತವೆಯೆಂದು ಅಲ್ಲಿ ಸಂದರ್ಶಿಸುವ ಪ್ರವಾಸಿಗರಿಗೆ ಅಚ್ಚರಿಯೋ ಅಚ್ಚರಿ! ಡಜನ್‌ಗಟ್ಟಲೆ ಆಡುಗಳು ಮರಗಳ ಮೇಲೇರಿ ಮೇಯುತ್ತಿರುವುದನ್ನೂ, ಹಕ್ಕಿಗಳಂತೆ ಪುಟ್ಟ ರೆಂಬೆ ಕೊಂಬೆಗಳ ಮೇಲೆ ಲೀಲಾಜಾಲವಾಗಿ ನಿಂತಿರುವುದನ್ನೂ ಅಲ್ಲಿ ಕಾಣಬಹುದು.

ಈ ಪ್ರದೇಶಗಳಲ್ಲಿ ಆಡುಗಳಿಗೆ ಆಹಾರಕ್ಕಾಗಿ ಗಿರಿ ಪರ್ವತಗಳನ್ನು ಹತ್ತುವ ಅನಿವಾರ್ಯತೆಯಿದೆ. ಏಕೆಂದರೆ ಮೊರಾಕೊ ದೇಶದ ಹೆಚ್ಚಿನ ಭೂ ಪ್ರದೇಶಗಳು ಒಣ ಹಾಗೂ ಮರುಭೂಮಿಯದ್ದಾಗಿದ್ದು ಅಲ್ಲಿ ಆಡುಗಳಿಗೆ ನೆಲದ ಮೇಲೆ ಬೇಕಾದಷ್ಟು ಆಹಾರ ಸಿಗುವುದಿಲ್ಲ. ಹೊಟ್ಟೆ ತುಂಬಾ ತಿನ್ನುವ ಹಂಬಲವೇ ಅವು ವೃಕ್ಷಗಳ ಮೇಲೇರುವ ಹಿಂದಿನ ರಹಸ್ಯ!

ಎಳೆಯ ವಯಸ್ಸಿನಿಂದಲೇ ಅವು ಗಿಡ ಮರಗಳ ಆರೋಹಣಗೈಯಲು ಎಳಸುತ್ತಾ ನಿಧಾನವಾಗಿ ಪರಿಣಿತಿಯನ್ನು ಪಡೆದುಕೊಳ್ಳುತ್ತವೆ. ವಿಶ್ವದ ಈ ಭಾಗದಲ್ಲಿ 'ಆರ್ಗನ್ ಟ್ರೀ' ಎಂಬ ರುಚಿವತ್ತಾದ ಹಣ್ಣಿನ ವೃಕ್ಷಗಳು ವಿಫುಲವಾಗಿದ್ದು, ಇವುಗಳ ಹಣ್ಣುಗಳಿಗಾಗಿ ಎಡತಾಕುತ್ತಾ ಮೇಷ ಜಾತಿಯ ಪ್ರಾಣಿಗಳು ಹೆಚ್ಚಾಗಿ ಆರ್ಗನ್ ಮರಗಳ ಮೇಲೆಯೇ ಓಡಾಡುತ್ತವೆ.

ಒಂದು ಆರ್ಗನ್ ಟ್ರೀ 8 ರಿಂದ 10 ಮೀಟರ್ ಎತ್ತರವಿರುತ್ತದೆ ಮತ್ತು 150 ರಿಂದ 200 ವರ್ಷ ಬಾಳುವಷ್ಟು ಗಟ್ಟಿಮುಟ್ಟಾಗಿದೆ. ಆರ್ಗನ್ ಹಣ್ಣಿನ ಬೀಜಗಳಿಂದ ತಯಾರಿಸಲ್ಪಡುವ ಎಣ್ಣೆ, ನೋವು ನಿವಾರಕ ಔಷಧಿಯಾಗಿಯೂ, ಆಹಾರವಾಗಿಯೂ ಬಲು ಉಪಯೋಗಕಾರಿ. ವೃಕ್ಷಾರೋಹಣಗೈದ ಆಡುಗಳು ತಿಂದ ಹಣ್ಣುಗಳೊಳಗಿನ ಬೀಜಗಳನ್ನು ಸ್ಥಳೀಯ ಜನರು, ಅವುಗಳು ವಿಸರ್ಜಿಸಿದ ಸೆಗಣಿಯಿಂದ ಯಥೇಚ್ಛವಾಗಿ ಸಂಗ್ರಹಿಸಿ ಎಣ್ಣೆ ಹಿಂಡಿ ತೆಗೆಯುತ್ತಾರೆ. ಮರದ ಮೇಲೇರುವ ಕುಶಲ ಮೇಕೆಗಳೇ ಅವರಿಗೆ ಜೀವನಾಧಾರ ಕೂಡ ಆಗಿವೆ!

**ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

